ಮುಜುಗರ ಇವನದ್ದು. ಪ್ರೆಸ್ಟೀಜ್‌ಗಾಗಿಯಾದರೂ ದುಬಾರಿ ಕಾರು ಕೊಳ್ಳಬೇಕಿರುತ್ತದೆ. ಇಂಡಿಕಾಗೆ ರಾಜಿಯಾಗುತ್ತಾನೆ. ಕಾರು ನಿಲ್ಲಿಸಲೂ ಕಾಂಪೌಂಡ್ ಇರಲಿಲ್ಲವಾಗಿ ಬೀದಿ ಬದಿಯಲ್ಲೇ ನಿಲ್ಲಿಸಬೇಕಾಗುತ್ತೆ. ಬೇಳೆ, ಬೆಲ್ಲ, ಉಪ್ಪು, ಅಕ್ಕಿ, ಮೆಣಸಿನಕಾಯಿ ಯಾವುದರ ಬೆಲೆಯೂ ಅವನಿಗೆ ಗೊತ್ತಿಲ್ಲ. ಎಲ್ಲದಕ್ಕೂ ಭಾಗ್ಯ ಇರಬೇಕು. 'ಉದ್ಯೋಗಂ ಪುರುಷ ಲಕ್ಷಣಂ. ಕೆಲಸ ನೋಡ್ಕೊಳ್ರಿ ಬೇಗ. ನೆಂಟರಿಷ್ಟರೂ ನೆರೆಮನೆಯವರಿಗೆ ನಾನೇನ್ ಉತ್ತರ ಹೇಳಲಿ? ಪ್ಲೀಸ್' ಎಂದವಳು ಗದ್ಗದಿತಳಾಗುವಾಗ ಮಕ್ಕಳು ಎಲ್ಲದಕ್ಕೂ ಅವಳನ್ನೇ ಪೀಡಿಸುವಾಗ ಇವನಿಗೆ ಒಂಥರಾ ಕೀಳರಿಮೆ ಕಾಡುತ್ತದೆ.

'ಮಕ್ಕಳು ಬೆಳೆದಿವೆ, ಹೈಸ್ಕೂಲಿಗೆ ಬಂದಿವೆ. ನೀವು ಹೀಗೆ ಸ್ವಾಭಿಮಾನ ಅಂತ ಕೂತ್ರೆ ನಾಳೆ ದಿನ ಹೊಟ್ಟೆಬಟ್ಟೆಗೆ ತಾಪತ್ರಯವಾದೀತು. ನನ್ನ ಸಂಬಳದಿಂದ ಬದುಕೋಕೆ ಸಾಧ್ಯವೇನ್ರಿ?' ಅವಳು ತಕರಾರು ಮಾಡುವಾಗ ಹಿಂದಿನಂತೆ ಲಿಪ್‌ಲಾಕ್ ಮಾಡುವ ಶಕ್ತಿಯೇ ಅವನಲ್ಲಿ ಜಿನುಗಲಿಲ್ಲ. ಸೋತ ಯೋಧನಂತಾದ ಕೆಲಸದ ಬೇಟೆಗೆ ಕಡೆಗೂ ಹೊರಟ. ಅವನ ಪ್ರೊಫೈಲ್ ನೋಡಿದವರು ಗುರುತಿಸಿ ಗೌರವಿಸುವಾಗ ಕಳೆದು ಹೋದ ಚೇತನ ಪುನಃ ಪುಟಿದೇಳುತ್ತದೆ. ಆದರೆ ಹಿಂದಿನ ಕಂಪನಿ ಏಕೆ ಬಿಟ್ಟಿರೆಂದು ಪ್ರಶ್ನಿಸಿದರೆ ಅವನಲ್ಲಿ ಸರಿಯಾದ ಉತ್ತರವಿಲ್ಲ. ನೀವು ಎಕ್ಸ್‌ಪೆಕ್ಟ್ ಮಾಡುವಷ್ಟು ಸ್ಯಾಲರಿಯ ಜಾಬ್ ನಮ್ಮಲ್ಲಿಲ್ಲ ಅಂದವರೇ ಹೆಚ್ಚು.

'ಅದಿರ್ಲಿ, ನಿಮ್ಮ ಹಳೆ ಕಂಪನಿಯವರು ನಿಮ್ಮ ಪರ್ಫಾರ್ಮೆನ್ಸ್ ಬಗ್ಗೆ ಏನೇನೋ ರಿಮಾರ್ಕ್ ಹಾಕಿದ್ದಾರಲ್ರೀ? ಯಾರನ್ನು ನಂಬೋಣ ಸಾರ್ ನಾವು?' ಅಂತಂದು ಕೆಲವರು ಅಡ್ಡಗೋಡೆಯ ಮೇಲೆ ದೀಪ ಇಟ್ಟರು. ಮರತೇಬಿಟ್ಟಿದ್ದ ಲ್ಯಾಪ್ ಟಾಪ್ ತೆಗೆದು ಚೆಕ್ ಮಾಡಿದ. ಅವನು ಕುಡಿದು ಹೆಂಗಸರೊಡನೆ ನರ್ತಿಸುವ ಗಲೀಜು ಫೋಟೋಗಳು ಕಂಡವು. ಹೊಟ್ಟೆಗೆ ಬೆಂಕಿ ಬಿದ್ದ ಅನುಭವ. ಯಾರೊಡನೆಯೂ ಹಂಚಿಕೊಳ್ಳಲಾಗದೆ ಬೇಸತ್ತು ಹೋದ. ಇನ್ನೂ ಸಣ್ಣ ಪುಟ್ಟ ಕಂಪನಿಯವರತ್ತ ಮುಖ ಮಾಡಿದ. 'ನಮ್ಮಲ್ಲಿ ನಿಮಗೆ ಲಾಯಕ್ಕಾದ ಕೆಲಸವಿಲ್ಲ ದೊರೆ' ಎಂದರು.

ತಿಂಗಳುಗಳು ನಶಿಸಿ ಹೋದವು. ಯಾರೋ ತನ್ನನ್ನು ಹುಡುಕಿಕೊಂಡು ಬರುತ್ತಾರೆಂಬ ಭ್ರಮೆ ತಾನೇ ಒಂದು ಕಂಪನಿ ಮಾಡಬಲ್ಲೆನೆಂಬ ಅಹಂ ಎಲ್ಲವೂ ಬಿಸಿಲಿಗಿಟ್ಟ ಮಂಜಿನಂತಾಯಿತು. ಎಲ್ಲಾ ಮನೆಯ ವಹಿವಾಟುಗಳು ಭಾಗ್ಯಳ ಸ್ಯಾಲರಿಯಲ್ಲಿ ಸರಿದೂಗಿಸಬೇಕಿತ್ತು. ಇವನು ಲಕ್ಷಗಟ್ಟಲೆ ದುಡಿದದ್ದುಂಟು ನಿಜ. ತಂಗಿಯರ ಮದುವೆ, ತಮ್ಮನ ಓದು, ಲಕ್ಷುರಿ ಬದುಕಿಗೆಲ್ಲಾ ಖರ್ಚಾಗಿ ಒಂದಿಷ್ಟು ಉಳಿದ ಬ್ಯಾಂಕ್ ಬ್ಯಾಲೆನ್ಸ್ ಈಗ ಕರಗ ಹತ್ತಿದೆ. ಬರೀ ಡ್ರಾ ಮಾಡೋದೆ ನಡೆದಿದೆ. ಕ್ರೆಡಿಟ್ ನಿಂತಿದೆ.

'ನೀವೇನು ಮಾಡಿದ್ದೀರಿ ನನಗೆ ನನ್ನ ಮಕ್ಕಳಿಗೆ ? ದುಡಿದಿದ್ದೆಲ್ಲಾ ತಂಗಿ ತಮ್ಮಂದಿರಿಗಿಟ್ಟಿರಿ. ನಮಗೇನು ಮನೆಯೇ? ಸೈಟೆ? ನನಗೀಗ ಕೆಲಸವಿಲ್ಲದಿದ್ದರೇನು ಗತಿ? ದಿನವೂ ಬಾಯಿ ಬಾಯಿ ಬಿಡುವ ಭಾಗ್ಯ ಬೇರೆ. ಇವಳಿಗಾಗಿ, ಮಕ್ಕಳಿಗಾಗಿ ತಾನೇನು ಮಾಡಲೇ ಇಲ್ಲವೇ ಎಂದು ಒಳಗೆ ಹಿಂಗಿಹೋಗುತ್ತಾನೆ. ಪರಿಸ್ಥಿತಿಗೆ ಹೊಂದಿಕೊಳ್ಳಲು ಸಜ್ಜಾಗುತ್ತಾನೆ. ಕಾರನ್ನು ತ್ಯಜಿಸಿ ಸಿಟಿ ಬಸ್ಸು ಹಿಡಿಯುತ್ತಾನೆ. ಕಂಪನಿಗಳಿಗೆ ಅಲೆವುದನ್ನು ಬಿಟ್ಟು ಆನ್‌ಲೈನ್ ವಾಚ್ ಮಾಡಿ ಹೊಸಬರಂತೆ ರೆಸ್ಯೂಮ್ ಕಳುಹಿಸುವ ಎಂದರೆ ಮಾಡಿರೋದು ಬರೀ ಬಿ.ಕಾಮ್. 'ಇಷ್ಟು ದಿನ ಏನ್ ಮಾಡ್ತಿದ್ರಿ? ನಮ್ಮಲ್ಲಿ ಯುವಕರಿಗಷ್ಟೇ ಆದ್ಯತೆ' ಅಂದವರು ಹಲವರು. ಸೂಟು ಬೂಟು ಹ್ಯಾಂಗರ್‌ಗೆ ನೇತು ಹಾಕಿ ಪ್ಯಾಂಟು ಶರ್ಟಿಗೆ ಇಳಿಯುತ್ತಾನೆ. ಯಾವುದೊ ಕಂಪನಿಯಿಂದ ಕರೆ ಬರುತ್ತದೆ. ಹೋಗುತ್ತಾನೆ. ಅಲ್ಲೆಲ್ಲ ತನ್ನ ಇಂಗ್ಲಿಷ್ ಜ್ಞಾನ ಪ್ರದರ್ಶಿಸದೆ ಅನನುಭವಿ ರೀತಿ ವರ್ತಿಸುತ್ತಾನೆ. ಬರೀ ಯಸ್, ನೊ, ಆಲ್‌ರೈಟ್ ಬಳಸುತ್ತಾನೆ.

'ಹಿಂದೆ ಎಲ್ಲಾದ್ರೂ ಕೆಲಸ ಮಾಡಿದ ಅನುಭವ ಉಂಟಾ?' ಪ್ರಶ್ನೆ ಎದುರಾದಾಗ 'ಹೀಗೆ ಸಾರ್, ಕಾಲ್ ಸೆಂಟರ್‌ಗಳಲ್ಲಿ' ಗೊಣಗುತ್ತಾನೆ. ಕಂಪನಿಯವ ಸರ್ಟಿಫಿಕೇಟ್ ಕೇಳುವಾಗ, 'ಅವರೆಲ್ಲಾ ಎಂತ ಸರ್ಟಿಫಿಕೇಟ್ ಕೊಡ್ತಾರೆ, ಸಾರ್ ಸ್ಯಾಲರಿ ತೀರಾ ಕಡಿಮೆ, ಹೀಗಾಗಿ ಬಿಟ್ಟೆ' ಎಂದು ಇವನು ಪ್ಯಾದೆ ನಗುವಾಗ 'ನೀವು ಎಷ್ಟು ಸ್ಯಾಲರಿ ಎಕ್ಸ್‌ಪೆಕ್ಟ್ ಮಾಡ್ತೀರಾ?' ಎಂದವನನ್ನು ಅಡಿಯಿಂದ ಮುಡಿಯುವರೆಗೂ ಪ್ಯಾನ್ ಮಾಡುತ್ತಾರೆ.

'ಈಗ ಪೈಂಟಗಿಂತ ಹೆಚ್ಚು ಕೊಡೋಕಾಗಲ್ಲ. ಮುಂದೆ ನಿಮ್ಮ ಪರ್ಫಾರ್ಮೆನ್ಸ್ ನೋಡಿಕೊಂಡು ಹೆಚ್ಚು ಮಾಡೋಣ. ನಮ್ಮದು ಇನ್ನೂ ಹೊಸ ಕಂಪನಿ...' ಆತ ಕ್ಕಿ ಕ್ಕಿ ಕ್ಕಿ ಮಾಡಿದ. ಮುಳುಗುವವನಿಗೆ ಹುಲ್ಲುಕಡ್ಡಿ ದೊರೆತಂತಾಯಿತು. 'ದೊಡ್ಡದಾಗಿ ಕಂಪನಿ ಬೆಳೆಸೋಣ ಬಿಡಿ ಬಾಸ್' ಇವನಂದ. ಇವನು ಬಾಸ್ ಅಂದಿದ್ದರಿಂದ ಕಂಪನಿಯ ಸೆಕ್ರೆಟರಿ ಖುಷ್ ಆದ. ಅದನ್ನು ಇವನೂ ಗಮನಿಸಿದ. ಕೆಲಸಕ್ಕೆ ಜಾಯಿನ್ ಆದ. ಮೊದ ಮೊದಲು ಹೇಳಿದ್ದಷ್ಟನ್ನೇ ಮೆಚ್ಚುವಂತೆ ಮಾಡಿ ಸೈ ಅನ್ನಿಸಿಕೊಂಡ. ಆಮೇಲೆ ತನ್ನಲ್ಲಿದ್ದ ಫ್ರೆಶ್ ಐಡಿಯಾಗಳನ್ನು ಹರವಿದ. 'ನಿಮಗಿಷ್ಟವಾದರೆ ಆಕ್ಸೆಪ್ಟ್ ಮಾಡಿಕೊಳ್ಳಿ ಪ್ಲೀಸ್' ಎಂದು ಬಾಗಿದ. ಇವನ ಚತುರತೆಗೆ ಸೆಕ್ರೆಟರಿ ಬೆರಗಾದ. ಬಳಸಿಕೊಂಡ ಸಹ. ಒಂದೆರಡು ತಿಂಗಳುಗಳಲ್ಲೇ ಗಿರೀಶನ ಚಾಲಾಕಿತನ, ಉತ್ಸಾಹ, ಇಂಗ್ಲಿಷ್ ಜ್ಞಾನ, ಹೇಳುವ ಮುಂಚೆಯೇ ಕಂಪನಿಯ ಅಗತ್ಯಗಳನ್ನು ಅರಿತು, ಬೆಸ್ಟ್ ಸಜೆಷನ್ ನೀಡುವ ಅವನ ಎಫೀಷಿಯೆನ್ಸಿ ಸೆಕ್ರೆಟರಿಯ ಮೆಚ್ಚುಗೆಗೆ ಪಾತ್ರವಾಗಿ ಮ್ಯಾನೇಜ್‌ಮೆಂಟ್ ಗಮನವನ್ನೂ ಸೆಳೆಯಿತು.

ಸಿಟಿ ಬಸ್‌ಗಳಲ್ಲಿ ಓಡಾಡುವಾಗ ನೊಂದುಕೊಂಡವಳು ಭಾಗ್ಯ. ಎಂತಹ ಹಣೆಬರಹ ಈತನದು! ಬುದ್ಧಿ ಭೂಮಿ ಆಳ್ವದೆ. ಆದರೆ ಅದೃಷ್ಟ?



ಎಂದಾಕೆ ಕುಗ್ಗಿ ಹೋಗುವಾಗಲೇ ಎಲ್ಲಿಂದಲೋ ಹಾರಿ ಬಂದು ಬಿದ್ದ ಬೀಜವೊಂದು ನೆಲದಲ್ಲಿ ಸೇರಿ ಇದ್ದಕ್ಕಿದ್ದಂತೆ ಒಂದು ದಿನ ಮೊಳಕೆಯೊಡೆವಂತೆ ಗಿರೀಶ ಈಗಿರುವ ಕಂಪನಿಯಲ್ಲೇ ಚಿಗುರೊಡೆದ. ಸೆಕ್ರೆಟರಿ ಅವನನ್ನು ತಮ್ಮ ಚೇಂಬರ್‌ಗೆ ಕರೆದು ಅವನ ಸುಪರ್ದಿಗೊಂದು ಪಲ್ಸರ್ ಬೈಕ್ ಕೊಟ್ಟ. 'ಇಂದಿನಿಂದ ನೀವು ಬಿಸಿನೆಸ್ ಡೆವಲಪ್‌ಮೆಂಟ್ ಎಕ್ಸಿಕ್ಯುಟಿವ್' ಎಂದು ಬೆನ್ನು ತಟ್ಟಿದ. ಅವನ ಯಶಸ್ವಿಯ ಯಾನ ಹಿಂದಿನ ಕಂಪನಿಯಲ್ಲೂ ಆರಂಭವಾಗಿದ್ದು ಬೈಕ್‌ನಿಂದಲೆ. 'ನಿಮಗೆ ಒಳ್ಳೆಯ ಫ್ಯೂಚರ್ ಇದೆ, ಆಲ್ ದಿ ಬೆಸ್ಟ್' ಅಂದು ಸೆಕ್ರೆಟರಿ ಕೈಕುಲುಕಿದ. ಬೈಕ್ ಏರಿದ ಇವನು ಒಂದು ಕಿಕ್ ಒದ್ದ. ದೊಡ್ಡದಾಗಿ ಶಬ್ದ ಮಾಡಿ ಮುಂದೋಡಿತು.

ಪ್ರತಿಕ್ರಿಯಿಸಿ: feedback@sudha.co.in